ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಆದ್ದರಿಂದ ಇದು ಅಷ್ಟು ಧಕ್ಕೆಯಾಗಲಾರದು. ನಮ್ಮ ರಾಜ್ಯದ ಜನತೆಯಲ್ಲಿ ಇಂಗ್ಲೀಷ್ ಮಾಧ್ಯಮದ ಹುಚ್ಚು ಇನ್ನು ಹೋಗಿಲ್ಲ. ಈಗ ನಮ್ಮ ಮಾನ್ಯ ಸದಸ್ಯರಾದಂಥ ಇದಿನಬ್ಬನವರು ಒಂದು ಶಾಲೆಯನ್ನು ನಡೆಸುತ್ತಿದ್ದಾರೆ. ಅವರು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಅವರು ಅನೇ ತರಗತಿಯಿಂದ ಇಂಗ್ಲೀಷ್ ಮಿಡಿಯಂ ಶಾಲೆಯನ್ನು ನಡೆಸುವುದಕ್ಕೆ ಅನುಮತಿ ಕೊಡಬೇಕೆಂದು ಕೇಳುತ್ತಿದ್ದಾರೆ. ಇಂತಹ ಸಂದರ್ಭಗಳು ಬಂದಾಗ ನಾವು ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ನಡೆಸುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ನಾಕು, ಎಷ್ಟು ಕ್ಲಾರಿಫಿಕೇಶನ್ಸ್ ಕೇಳುತ್ತೀರಿ. ಟೈಮ್ ಇಲ್ಲ ತಾವು ಕುಳಿತು ಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಕನ್ನಡ ಮಾಧ್ಯಮದ ಶಾಲೆಗಳ ಗುಣಮಟ್ಟ ಕಡಿಮೆ ..

ಅಧ್ಯಕ್ಷರು.—ಇಲ್ಲ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮಂತ್ರಿಗಳು ಸಂದರ್ಭಕ್ಕೆ ತಕ್ಕಂತೆ ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಪರವಾನಿಗೆಯನ್ನು ಕೊಡುತ್ತೇವೆಂದು ಹೇಳಿದರು...

ಅಧ್ಯಕ್ಷರು.—ಇಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ, ಬೇಕಾದರೆ ತಾವು ಇದನ್ನು ಅರ್ಧ ಗಂಟೆ ಚರ್ಚೆಗೆ ಕಳುಹಿಸಿಕೊಡಿ...

ಶ್ರೀ ಡಿ. ಮಂಜುನಾಥ್.—ಕನ್ನಡ ಶಾಲೆಗಳಲ್ಲಿ ಗುಣಮಟ್ಟ ಹೆಚ್ಚು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರಿ ಕನ್ನಡ ಶಾಲೆಗಳ ಗುಣಮಟ್ಟವನ್ನು ಏರಿಸುವುದಕ್ಕೆ ಮತ್ತು ಸರಿಯಾದ ರೀತಿಯಲ್ಲಿ ಉತ್ತೇಜಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಪ್ರತಾಪ ಚಂದ್ರಶೆಟ್ಟಿಯವರು...

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು

ಹೆಚ್.ಡಿ. ಕೋಟೆಯಲ್ಲಿನ ಲೋಕೋಪಯೋಗಿ ಇಲಾಖೆಯ ಳನೇ ಉಪ ವಿಭಾಗ ಕಚೇರಿಯಂ ತನಿಖೆ

೧೨೭೪ (ಎ) ಶ್ರೀ ಎಂ. ಶಿವಣ್ಣ.—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಚ್.ಡಿ. ಕೋಟೆ ತಾಲ್ಲೂಕು ಲೋಕೋಪಯೋಗಿ, ಳನೇ ಉಪ ವಿಭಾಗ ಇಲಾಖೆಯಲ್ಲಿ ಕಳಪೆ ಕೆಲಸ ನಡೆದಿರುವ ಬಗ್ಗೆ ಸಾರ್ವಜನಿಕರಿಂದ ಬಂದ ದೂರಿನ ಆಧಾರದ ಮೇಲೆ ಇಲಾಖೆಯ ಪತಿಯು ವಿಜಿಲೆನ್ಸ್‌ನಿಂದ ತನಿಖೆ ಮಾಡಿಸಲಾಗಿದೆಯೇ.

ಆ) ಹಾಗಿದ್ದಲ್ಲಿ ತನಿಖೆಯನ್ನು ಸಾರ್ವಜನಿಕರ ಸಮಕ್ಷಮದಲ್ಲಿ ಮಾಡಲಾಯಿತೆ.

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮಂತ್ರಿಗಳು).—

ಅ) ಹೌದು

ಆ) ಇಲಾಖಾ ಪತಿಯಿಂದ ಮಾಡುವ ತನಿಖೆಯನ್ನು ಸಾರ್ವಜನಿಕರ ಸಮಕ್ಷಮದಲ್ಲಿ ಮಾಡಲಾಗುವುದಿಲ್ಲ.

ಇ) ತನಿಖಾ ವರದಿಯಲ್ಲಿಯಂ ಲೋಪದೋಷಗಳಿಗೆ ಹೊಣೆಗಾರರಾದವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲಂ ಆದೇಶಮಾಡಲಾಗಿದೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೆ ಲೋಕೋಪಯೋಗಿ ಇಲಾಖೆಯ ಮಂತ್ರಿಯಾಂತರ ಮಾಡಿಸಿರುವ ಕೆಲಸಕಾರ್ಯಗಳು ಕಳಪೆ ದರ್ಜೆಯವು ಆಗಿವೆ. ಸಾರ್ವಜನಿಕರು ಇದರ ಬಗ್ಗೆ ದೂರು ಕೊಟ್ಟಾಗ ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಅಧಿಕಾರಿಗಳು ಹೋಗುತ್ತಾರೆ, ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಹೋದ ಅಧಿಕಾರಿಗಳನ್ನೇ ಕಂಟ್ರಾಕ್ಟ್‌ದಾರರು ಬುಕ್ ಮಾಡಿಕೊಂಡು ಬಿಡುತ್ತಾರೆ. ಆದ್ದರಿಂದ ಮಾನ್ಯ ಸಚಿವರಿಗೆ ನಾನು ಕೇಳಿಕೊಳ್ಳುವುದೇನೆಂದರೆ, ಕಳಪೆ ಕೆಲಸ ಕಾರ್ಯಗಳ ಬಗ್ಗೆ ದೂರುಗಳು ಬಂದಾಗ ಇನ್‌ವೆಸ್ಟಿಗೇಷನ್ ಅಧಿಕಾರಿಗಳು ಸಾರ್ವಜನಿಕರ ಸಮಕ್ಷಮ ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಆದೇಶ ಕೊಡಬೇಕು ಎಂದು ತಮ್ಮ ಮುಂಖಾಂತರ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಯಾರು ಕಂಪ್ಲೇಂಟ್ ಕೊಟ್ಟಿರುತ್ತಾರೋ ಅವರನ್ನು ಜೊತೆಗೆ ಸೇರಿಸಿಕೊಂಡು ಇನ್‌ವೆಸ್ಟಿಗೇಟ್ ಮಾಡಿದರೆ ಅನುಕೂಲವಾಗುತ್ತದೆ. ಮಾನ್ಯ ಸಚಿವರು ತಮ್ಮ ಬೇಡಿಕೆಯ ಮೇಲೆ ಉತ್ತರ ಕೊಟ್ಟಾಗ ಅಕ್ರಮ ಮಾಡಿರುವ ೮೫ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರುವುದಾಗಿ ಹೇಳಿದ್ದಾರೆ. ಬಹಳ ಸಂತೋಷ. ಆದರೆ, ನಮ್ಮ ಕ್ಷೇತ್ರದ ಅಧಿಕಾರಿಗಳು ಹೇಗೆ ಇದರಿಂದ ತಪ್ಪಿಸಿಕೊಂಡರೆಂದು ಆಶ್ಚರ್ಯವಾಗುತ್ತದೆ. ಆದ್ದರಿಂದ, ಮಾನ್ಯ ಮಂತ್ರಿಗಳು ಇನ್ನು ಮುಂದೆ ಇನ್‌ವೆಸ್ಟಿಗೇಟನ್ನು ಸಾರ್ವಜನಿಕರ ಮುಂದೆ ಮಾಡುವುದಕ್ಕೆ ಆದೇಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಅವರು ಹೇಳಿರತಕ್ಕಂಥದ್ದು, ತನಿಖೆಯನ್ನು ನಡೆಸುವಾಗ ಸಾರ್ವಜನಿಕರ ಸಮಕ್ಷಮ ನಡೆಸಬೇಕೆಂಬುದು ಅವರ ಮೂಲ ಪ್ರಶ್ನೆ, ನಾವು ಸಾರ್ವಜನಿಕರ ಸಮಕ್ಷಮದ ಎನ್‌ಕ್ವೈರಿಯನ್ನು ಮಾಡುವುದಕ್ಕಾಗುವುದಿಲ್ಲ ಯಾರಿಂದಲಾದರೂ ದೂರು ಬಂದರೆ, ನಮ್ಮ ಇಲಾಖೆಯಲ್ಲಿ ಫ್ಲೈಯಿಂಗ್ ಸ್ಕ್ವಾಡ್ ಇದೆ. ಈ ಸ್ಕ್ವಾಡ್‌ನವರು ತನಿಖೆಯನ್ನು ನಡೆಸುತ್ತಾರೆ. ಹೆಗ್ಗಡದೇವನ ಕೋಟೆಯಿಂದ ಶ್ರೀ ಕೆ ಜಿ. ಪುಟ್ಟಸ್ವಾಮಿ ಎಂಬುವವರು ದಿನಾಂಕ ೧೧-೬-೧೯೮೬ ರಂದು ಒಂದು ಕಂಪ್ಲೇಂಟ್ ಕೊಟ್ಟು ಆನಂದವಾಡಿ ರಸ್ತೆಯ ನಿರ್ಮಾಣ ಕಾರ್ಯದಲ್ಲಿ ಅಕ್ರಮಗಳು ನಡೆದಿವೆ ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆ ತನಿಖೆ ಮಾಡಿಸಿ ವರದಿಯನ್ನು ತರಿಸಿಕೊಂಡಿದ್ದೇನೆ. ಈ ರಸ್ತೆಯ ವಿಷಯ ನಿನ್ನೆ ಮೊನ್ನೆಯ ಸಮಾಚಾರವಲ್ಲ. ೧೯೭೭ನೇ ಇಸವಿಯಿಂದ ಈ ರಸ್ತೆಯ ಚರಿತ್ರೆ ಪ್ರಾರಂಭವಾಗಿದೆ. ಈ ರಸ್ತೆಯ ನಿರ್ಮಾಣ ಕಾರ್ಯದಲ್ಲಿ ಎರಡೂವರೆ ಲಕ್ಷ ರೂಪಾಯಿಗಳನ್ನು ಬಿಲ್ ಮಾಡಿಕೊಂಡು ತಿಂದು ಹಾಕಿದ್ದಾರೆಂದು ಆಪಾದನೆ ಮಾಡಿರುವುದು ಸರಿಯಲ್ಲ. ಈ ರಸ್ತೆ ಕಾರ್ಯದಲ್ಲಿ ಒಂದು ಸಾರಿ ೭,೦೧೬ ರೂಪಾಯಿಗಳ ಬಿಲ್ ಆಗಿದೆ. ಮತ್ತೊಂದು ಸಾರಿ ೧೪,೬೧೫ ರೂಪಾಯಿಗಳನ್ನು ಬಿಲ್ ಮಾಡಿ ಕೊಡಲಾಗಿದೆ. ಕೆಲವು ಸಾರಿ ಕಂಪ್ಲೇಂಟ್ ಕೊಡುವುದರ ಉತ್ಪ್ರೇಕ್ಷೆಯಿಂದ ಕೂಡಿರುತ್ತದೆ. ಇದರಲ್ಲಿ ಕೆಲವು ಅಕ್ರಮಗಳು ನಡೆದಿರಬಹುದು. ಅದರ ಬಗ್ಗೆ ತನಿಖೆ ಮಾಡಿಸಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇದರಲ್ಲಿ ಯಾರನ್ನೂ ಸ್ಪೇರ್ ಮಾಡುವ ಅವಶ್ಯಕತೆ ಇಲ್ಲ. ಆದರೆ ಪಬ್ಲಿಕ್‌ನ್ನು ಎದುರಿಗೆ ನಿಲ್ಲಿಸಿಕೊಂಡು ಎನ್‌ಕ್ವೈರಿ ಮಾಡುವುದಕ್ಕಾಗುವುದಿಲ್ಲ. ಕಂಪ್ಲೇಂಟ್ ಕೊಡುವವರು ಸುಮ್ಮನೆ ಕಂಪ್ಲೇಂಟ್ ಕೊಡುವುದಿಲ್ಲ. ಅವರದೇನಾದರೂ ಕೆಲಸ ಆಗಲಿಲ್ಲ ಎಂದರೆ ಅರ್ಜಿ ಕೊಡುವುದಕ್ಕೆ ಬರುತ್ತಾರೆ. ಇದರ ಬಗ್ಗೆ ನನಗೆ ಅನುಭವ ಇದೆ. ಕೆಲವು ಸಾರಿ ಕಂಟ್ರಾಕ್ಟ್‌ದಾರರುಗಳೇ ಒಬ್ಬರ ಮೇಲೆ ಒಬ್ಬರು ಅರ್ಜಿಯನ್ನು ಕೊಡುವವರಿದ್ದಾರೆ. ಪ್ರಾಮಾಣಿಕವಾಗಿ ಅರ್ಜಿಯನ್ನು ಕೊಡುವವರೂ ಇದ್ದಾರೆ. ಅರ್ಜಿ ಬಂದ ತಕ್ಷಣ ತನಿಖೆಗೆ ಆದೇಶವನ್ನು ಕೊಟ್ಟಿದ್ದೇನೆ. ಈ ತನಿಖೆ ರಿಪೋರ್ಟ್ ಬಂದಿದೆ. ೧೯೭೭ರಿಂದ ಇದರ ಬ್ಯಾಕ್‌ಗ್ರೌಂಡ್ ಹಿಸ್ಟರಿಯನ್ನೆಲ್ಲ ಕೋಟ್ ಮಾಡಿದ್ದಾರೆ. ಅದನ್ನು ನೋಡಿ ಯಾರ ಮೇಲೆ, ಯಾವರೀತಿಯ ಕ್ರಮತೆಗೆದುಕೊಳ್ಳಬೇಕೋ, ಎಷ್ಟರಮಟ್ಟಿಗೆ ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕೋ, ಅದನ್ನು ಮಾಡುತ್ತೇವೆ.

ಅಧ್ಯಕ್ಷರು.—ಇನ್ನೊಮ್ಮೆ ಕೇಳುತ್ತೀರಾ ? ಮಾನ್ಯ ಮಂತ್ರಿಯವರು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಸಚಿವರ ದೃಷ್ಟಿಯಲ್ಲಿ ಈ ವಿಷಯಗಳು ಇದ್ದು, ಅಂತಹ ಭ್ರಷ್ಟ ಅಧಿಕಾರಿಗಳ ನಿರ್ಮೂಲನೆಯಾದರೆ ಸಾಕು ಎಂದು ಹೇಳಬಯಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಕ್ಷಮಿಸ ಬೇಕು. ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಿ ನನ ಹೆಸರನ್ನು ಸೇರಿಸಿದರು, ಮಂತ್ರಿಗಳು ಸೂಪರ್

ವೈಸರ್ಸ್ ಜೊತೆಗೆ ಶಾಮೀಲಾಗಿದ್ದಾರೆ ಎಂದು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ. ನಾನು ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ, ಅವರು ಸೂಕ್ತ ದಾಖಲೆಗಳನ್ನು ತಮ್ಮ ಮುಖಾಂತರ ಕೊಟ್ಟರೆ, ಅದನ್ನು ಲೋಕಾಯುಕ್ತಕ್ಕೆ ಕೂಡ ಕಳುಹಿಸಲಿಕ್ಕೆ ನಾನು ಸಿದ್ಧನಾಗಿದ್ದೇನೆ.

ಶ್ರೀ ಕೆ. ಎಚ್. ಪಟೀಲ್.—ಮಾನ್ಯ ಮಂತ್ರಿಗಳು ಇಲ್ಲಿಯೇ ಇರುವುದರಿಂದ, ಸದಸ್ಯರು ಏನಾದರೂ ಆಪಾದನೆಗಳನ್ನು ಮಾಡಿದರೆ, ಅದರ ಬಗ್ಗೆ ವಿವರಣೆಯನ್ನು ಮಂತ್ರಿಗಳು ಕೊಡಲಿ. ಎಲ್ಲದಕ್ಕೂ ಸೂಕ್ತ ದಾಖಲೆಗಳನ್ನು ಕೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು ಏನು ಹೇಳಿದರು ಅಂದರೆ, ಭ್ರಷ್ಟಾಚಾರ ನಡೆದ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇವೆ. ಅಧಿಕಾರಿಗಳ ಸಂಬಂಧೀಕರು ಇದರಲ್ಲಿ ಸೇರಿಕೊಂಡು ಅಕ್ರಮ ನಡೆಸಿದ್ದಾರೆ ಇದಕ್ಕೆ ಮಂತ್ರಿಗಳು ಶಾಮೀಲಾಗಿದ್ದಾರೆ ಎಂದು ಹೇಳಿದ್ದಾರೆ. ಅದು ರಿಕಾರ್ಡ್‌ಗೆ ಹೋಗಿದೆ. ತಾವುಗಳು ಈಗ ಬೇರೆ ಪ್ರಶ್ನೆಗೆ ಹೋಗುವ ಮುಂಚೆ ತಮ್ಮ ಕ್ಷಮೆ ಕೋರಿ ಒಂದು ಮಾತನ್ನು ಈ ಕುರಿತು ಹೇಳಬಯಸುತ್ತೇನೆ. ಏಕೆಂದರೆ ಸರಕಾರದ ಮೇಲೆ ಇಷ್ಟೊಂದು ಗುರುತರವಾದ ಆಪಾದನೆಗಳನ್ನು ಮಾಡಿದಾಗ, ಯಾವುದೇ ಕಾರಣದಿಂದ ಆದರಿಂದ ನುಣುಚಿಕೊಳ್ಳಬಾರದು ಎಂದು ಈ ಮಾತನ್ನು ಹೇಳಿದ್ದಾರೆ. ಏನಾದರೂ ಸೂಕ್ತ ದಾಖಲೆಗಳು ಇದ್ದರೆ ಕೊಡಿ, ವಿಚಾರಣೆ ಮಾಡಿಸುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಕೃಷಿಮಂತ್ರಿಯಂಪರು ವಿವರಣೆಯನ್ನು ಕೊಟ್ಟಿದ್ದಾರೆ. ಅವರ ಗಮನಕ್ಕೆ ಬಂದಿರುವುದನ್ನು ಅವರು ಉತ್ತರಿಸಿದ್ದಾರೆ. ಯಾವುದೇ ಸದಸ್ಯರ ಹಕ್ಕನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ತಮ್ಮಲ್ಲಿರತಕ್ಕಂತಹ ಮಾಹಿತಿಯನ್ನು ಕೊಡಲಿ, ಅದರ ಮೇಲೆ ಪ್ರಾಮಾಣಿಕವಾದಂತಹ ಕ್ರಮವನ್ನು ಸರಕಾರ ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ನಿಗಮದ ಬಗ್ಗೆ

೧೧೨೫ ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ) ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಾಪುರದಲ್ಲಿ ಕೃಷ್ಣಾ ಜಲಾನಯನ ಪ್ರದೇಶದ ಅಭಿವೃದ್ಧಿ ನಿಗಮ ಅಸ್ತಿತ್ವಕ್ಕೆ ಬಂದಿದ್ದು ಯಾವಾಗ ?

ಆ) ಈ ನಿಗಮದ ಕಾರ್ಯವ್ಯಾಪ್ತಿಗೆ ಒಪ್ಪಿಸಿರುವ ಕೆಲಸಗಳು ಏನು ?

ಇ) ಇಲ್ಲಿ ಎಷ್ಟು ಜನ ಸಿಬ್ಬಂದಿಯವರು ಕೆಲಸ ಮಾಡುತ್ತಿದ್ದಾರೆ (ವಿವರ ಒದಗಿಸುವುದು) ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಮತ್ತು ನೀರಾವರಿ ಮಂತ್ರಿಗಳು).—

ಅ) ೯-೬-೧೯೮೬ರಂದು ಅಸ್ತಿತ್ವಕ್ಕೆ ಬಂದಿತು.

ಆ) ಕೆಳಕಂಡ ಜಿಲ್ಲೆಗಳಲ್ಲಿ ಬರುವ ಏತ ನೀರಾವರಿ ಯೋಜನೆಗಳು :

(೧) ಶಿವಮೊಗ್ಗ (೨) ಚಿತ್ರದುರ್ಗ (೦) ಉತ್ತರ ಕನ್ನಡ (೪) ಬೆಳಗಾವಿ (೫) ವಿಜಾಪುರ (೬) ಧಾರವಾಡ (೭) ಗುಲ್ಬರ್ಗಾ (೮) ಬೀದರ್ (೯) ಬಳ್ಳಾರಿ (೧೦) ರಾಯಚೂರು.